284 (ಶ್ರೀ ಪಾಟೀಲ್ ವಿ.ಎಸ್.(ಯಲ್ಲಾಪುರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತಡಸ್–ಕುಮಟಾ ರಾಜ್ಯ ಹೆದಾರಿಯನ್ನು ಖಾಸಗಿ ಸಹಭಾಗಿತ್ವದಡಿ ಅಭಿವೃದ್ಧಿಪಡಿಸುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆಯೇ;

ಆ) ತಡಸ್–ಕುಮಟಾ ರಾಜ್ಯ ಹೆದ್ದಾರಿಯನ್ನು ರಾಷ್ಟ್ರೀಯ ಹೆದ್ದಾರಿ ಎಂದು ಪರಿಗಣಿಸುವ ಪ್ರಸ್ತಾವನೆಯು ಪರಿಗಣಿಸಲ್ಪಟ್ಟಿದೆಯೇ?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಹೌದು.

ಆ) ಈ ಹೆದ್ದಾರಿಯ 140.00 ಕಿ.ಮೀ. ಉದ್ದವನ್ನು ರಾಷ್ಟ್ರೀಯ ಹೆದ್ದಾರಿಯಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆಯನ್ನು ದಿನಾಂಕ:26–02–2009 ರಲ್ಲಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆ.

982 ಶ್ರೀ ಅಭಯಚಂದ್ರ ಜೈನ್ ಕೆ.ಎಂ.ಎಲ್.ಎ : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾಗಲಕೋಟೆಯಲ್ಲಿ ವಾಸವಾಗಿರುವ ಮಾಜಿ ಜಿಲ್ಲಾ ಪುನರ್ ವಿಂಗಡಣಾ ಸಮಿತಿ ಅಧ್ಯಕ್ಷರಿಗೆ ದೂರವಾಣಿ ಕರೆ ಮೂಲಕ ಹಾಗೂ ಅನಾಮಧೇಯ ಪತ್ರದ ಮೂಲಕ ಜೀವ ಬೆದರಿಕೆ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಯಾವ ಕಾರಣಕ್ಕೆ ಜೀವ ಬೆದರಿಕೆ ಬಂದಿದೆ (ವಿವರ ಒದಗಿಸಿ);

ಆ) ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಬಾಗಲಕೋಟೆ ಪೊಲೀಸು ವರಿಷ್ಠಾಧಿಕಾರಿಗಳಿಗೆ ಎರಡು ಬಾರಿ ದೂರು ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಸರ್ಕಾರ ಪ್ರಕರಣಕ್ಕೆ ಸಂಬಂಧಿಸಿದಂತೆ ತೆಗೆದುಕೊಂಡಿರುವ ಕ್ರಮಗಳೇನು (ವಿವರ ಒದಗಿಸಿ)?

ಶ್ರೀ ಡಾ: ವಿ.ಎಸ್.ಆಚಾರ್ಯ (ಗೃಹ ಸಚಿವರು) :

ಅ) ಹೌದು. ಶ್ರೀ ಟಿ.ಎಂ.ಹುಂಡೇಕಾರ್‌ರವರು ದಿನಾಂಕ: 2–6–09ರಲ್ಲಿ ಮತ್ತು 29–6–09ರಲ್ಲಿ ಪೊಲೀಸು ಅಧೀಕ್ಷಕರು, ಬಾಗಲಕೋಟೆ ಜಿಲ್ಲೆ ಅವರಿಗೆ ಮನವಿ ಸಲ್ಲಿಸಿ ತಮಗೆ ದೂರವಾಣಿ ಮೂಲಕ ಜೀವ ಬೆದರಿಕೆ ಬಂದಿರುವ ಬಗ್ಗೆ ಹಾಗೂ ತಮಗೆ ಜೀವ ರಕ್ಷಣೆ ನೀಡಬೇಕೆಂದು ಕೇಳಿರುತ್ತಾರೆ. ಸದರಿ ಮನವಿಯ ಬಗ್ಗೆ ಡಿ.ಎಸ್.ಪಿ ಬಾಗಲಕೋಟೆ ಇವರಿಗೆ ಸ್ಥಾನಿಕವಾಗಿ ವಿಚರಣೆ ಮಾಡಿ ಸೂಕ್ತ

ಕ್ರಮ ಕೈಗೊಂಡು ವರದಿ ಸಲ್ಲಿಸುವಂತೆ ಸೂಚಿಸಿ ಕಳುಹಿಸಲಾಗಿದ್ದು, ಡಿ.ಎಸ್.ಪಿ.ಬಾಗಲಕೋಟೆ ಇವರು ವಿಚಾರಣೆ ಕಾಲಕ್ಕೆ ಅರ್ಜಿದಾರರನ್ನು ಸಂಪರ್ಕಿಸಿದ್ದು ಸದರಿಯವರು ತಮಗೆ ಜೀವ ಬೆದರಿಕೆ ಇರುವ ಬಗ್ಗೆ ವಿವರ ನೀಡಲು ಕಾಲಾವಕಾಶ ಕೋರಿದ್ದರಿಂದ ಸದರಿ ಅರ್ಜಿಯು ವಿಚಾರಣೆಯಲ್ಲಿರುತ್ತದೆ. ಅರ್ಜಿದಾರರು ಬಸವೇಶ್ವರ ವಿದ್ಯಾವರ್ಧಕ ಸಂಘದ ಲೆಕ್ಕ ಪತ್ರದ ಬಗ್ಗೆ ಮತ್ತು ಅಧ್ಯಕ್ಷರ ದುರಾಡಳಿತ ಬಗ್ಗೆ ಪತ್ರಿಕಾ ಪ್ರಕಟಣೆ ನೀಡಿದ್ದರಿಂದ ಅನಾಮಿಕ ವ್ಯಕ್ತಿಗಳು ದೂರವಾಣಿಯಲ್ಲಿ ಬೆದರಿಕೆ ಹಾಕಿದ ಬಗ್ಗೆ ಅರ್ಜಿಯಿಂದ ತಿಳಿದು ಬಂದಿರುತ್ತದೆ.

English version

Yes. Sri T.M.Hundekar, Ex Chairman of Bagalkot District Reorganisation Committee, has reported to SP, Bagalkot on 2-6-09 and 29-6-09 that he is receiving threatening calls and requested to give protection. The representation has been sent to DSP Bagalkot with instruction to make local enquiry and take suitable action. The DSP has contacted the complainant and the complainant has requested time to furnish information on the thrcat to his life. The complaint is under investigation. The reason for threatening call is that the complainant has given a press statement on the accounts of the Basaveswara Vidyavardhaka Sangha and mis management of its Chairman.

ಆ) ಅರ್ಜಿದಾರರು ದಿನಾಂಕ: 2–6–09 ಮತ್ತು 29–6–09ರಂದು ದೂರನ್ನು ನೀಡಿದ್ದು ಸದರಿ ದೂರಿನ ವಿಚಾರಣೆಯನ್ನು ಡಿ.ಎಸ್.ಪಿ. ಬಾಗಲಕೋಟೆ ಇವರಿಗೆ ಸ್ಥಾನಿಕ ವಿಚಾರಣೆ ಮಾಡಿ ವರದಿ ಸಲ್ಲಿಸಲು ನಿರ್ದೇಶಿಸಿದ್ದು ಸದರಿ ವರದಿಗಾಗಿ ಬಾಕಿ ಇರುತ್ತದೆ. ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ದೂರಿನ ವಿಷಯಕ್ಕೆ ಅನುಸರಿಸಿ ಡಿ.ಎಸ್.ಪಿ. ಬಾಗಲಕೋಟೆ ಇವರಿಂದ ವಿಚಾರಣಾ ವರದಿಯನ್ನು ಪಡೆದು ಪರಿಶೀಲಿಸಿ ಅಗತ್ಯ ಪೊಲೀಸ್ ರಕ್ಷಣೆ ನೀಡುವ ವ್ಯವಸ್ಥೆ ಮಾಡಲಾಗುವುದು. ಸದರಿ ದೂರುದಾರರು 15 ದಿನಗಳ ಕಾಲಾವಕಾಶ ಕೋರಿರುತ್ತಾರೆ. ಅಲ್ಲದೆ ದೂರುದಾರರು ಮಾಡಿರುವ ದೂರವಾಣಿ ಕರೆಗಳ ವಿವರ ಪಡೆಯಲು ಬಿ.ಎಸ್.ಎನ್.ಎಲ್ ನಿಂದ ಮಾಃಇತಿ ಕೋರಿದ್ದು, ವರದಿ ಬಂದ ನಂತರ ಪರಿಶೀಲಿಸಿ ಅಗತ್ಯ ಕ್ರಮ ತೆಗೆದುಕೊಳ್ಳಲಾಗುವುದು.

English version

Yes. The complainant has complained on 2-6-2009 and 29-6-2009. The DSP, Bagalkot was instructed to enquire into this and send report. His report is awaited. On receipt of report from DSP Bagalkot, action will be taken to provide police protection to the complaint. The complainant has requested 15 days time to furnish some information. BSNL has been requested to provide particulars of the telephone calls made and received from the phone of complainant and as soon as the report from BSNL is received further suitable action will be taken.

1062 ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೈದ್ರಾಬಾದ್–ಕರ್ನಾಟಕ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಕೊಪ್ಪಳ ಜಿಲ್ಲೆಯಲ್ಲಿ ಇರುವ ಒಟ್ಟು ಗ್ರಾಮಾಂತರ ಬಸ್ ಮಾರ್ಗಗಳೆಷ್ಟು;

ಆ) ಹೊಸದಾಗಿ ಬಸ್ ಮಾರ್ಗಗಳನ್ನು ಪ್ರಾರಂಭಿಸಲು ಸರ್ಕಾರವು ಯಾವ ಯಾವ ಕ್ರಮಗಳನ್ನು ತೆಗೆದುಕೊಂಡಿದೆ;

ಇ) ಕುಷ್ಟಗಿ ತಾಲ್ಲೂಕಿನಲ್ಲಿ ಹಾಲಿ ಇರುವ ಬಸ್ ಮಾರ್ಗಗಳು ಎಷ್ಟು;

ಈ) ಬಸ್ ಮಾರ್ಗಗಳನ್ನು ಹೆಚ್ಚಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿವೆ?

ಶ್ರೀ ಆರ್.ಅಶೋಕ (ಸಾರಿಗೆ ಸಚಿವರು) :

ಅ) 281.

ಆ) ಪ್ರಸಕ್ತ ಸಾಲಿನಲ್ಲಿ ಕೊಪ್ಪಳ ವಿಭಾಗದಲ್ಲಿ 20 ಮಾರ್ಗಗಳನ್ನು ಹೊಸದಾಗಿ ಪ್ರಾರಂಭಿಸಲಾಗಿದೆ. ಮುಂದೆಯೂ ಸಹ ಪ್ರಯಾಣಿಕರ ಬೇಡಿಕೆಗಳಿಗನುಗುಣವಾಗಿ ಹೊಸ ಬಸ್‌ಮಾರ್ಗಗಳನ್ನು ಪ್ರಾರಂಭಿಸಲಾಗುವುದು.

ಇ) 105.

ಈ) ಪ್ರಸಕ್ತ ಸಾಲಿನಲ್ಲಿ ಕುಷ್ಟಗಿ ತಾಲ್ಲೂಕಿನಲ್ಲಿ 6 ಮಾರ್ಗಗಳನ್ನು ಹೊಸದಾಗಿ ಪ್ರಾರಂಭಿಸಲಾಗಿದೆ. ಮುಂದೆಯೂ ಸಹ ಬೇಡಿಕೆಗನುಗುಣವಾಗಿ ಕೋರಿಕೆಯಂತೆ ಹೊಸ ಬಸ್ ಮಾರ್ಗಗಳನ್ನು ಪ್ರಾರಂಭಿಸಲಾಗುವುದು.

976 ಶ್ರೀ ಅಮರೇಶ್(ಮುಳಬಾಗಿಲು) : ಮಾನ್ಯ ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನರಚನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?